# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಸಿ.ಸಿ.750-2011** **ಸಿ. ಡಬ್ಲುಃ 01**

**ಪಿ ಡಬ್ಲುಃ 03**

| | |
|---|---|
| ಸಾಕ್ಷಿದಾರರ ಹೆಸರು | ಹರೀಶ್ ಎನ್.ಪಿ |
| ತಂದೆ/ಗಂಡನ ಹಸೆರು | ಪುಟ್ಟಸ್ವಾಮಿ |
| ವಯಸ್ಸು | 41 ವರ್ಷ |
| ಉದ್ಯೋಗ | ಪಿ.ಐ. ಚನ್ನಪಟ್ಟಣ ಪೊಲೀಸ್ ತರಬೇತಿ ಶಾಲೆ, |
| ವಾಸ | ಬೆಂಗಳೂರು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 16-01-2024** |

## 299 ಸಿ.ಆರ್.ಪಿ.ಸಿ ಅಡಿ ವಿಚಾರಣೆಃ

## ಮುಖ್ಯ ವಿಚಾರಣೆಃ ನ್ಯಾಯಾಲಯದಿಂದಃ

ನಾನು ಮಾರ್ಚ್ ರಿಂದ 2010 ರಿಂದ ಜೂನ್ 2014 ರವರೆಗೆ ಅ.ಜಾ.ಲಾ.ನಿ ವಿಭಾಗ ವಿಶೇಷ ಪೊಲೀಸ್ ಠಾಣೆ ಮೈಸೂರು ಇಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.24/01/2011 ರಂದು ಸಂಜೆ 4.00 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿ ಇದ್ದಾಗ ಬಾತ್ಮಿದಾರರಿರಿಂದ ನಂಜನಗೂಡು ಪಟ್ಟಣ ಕಡೆಯಿಂದ ಬಸವಸಪುರ ಹಾಗೂ ಅಕ್ಕ-ಪಕ್ಕದ ಹಳ್ಳಿಗಳಿಗೆ ಆಕ್ರಮವಾಗಿ ಮದ್ಯದ ಬಾಟಲಿಗಳು ಸಾಗಾಣೆ ಆಗುತ್ತಿದೆ ಎಂಬ ಬಗ್ಗೆ ಬಾತ್ಮಿ ಬಂದ ಮೇರೆಗೆ ಚಾಸಾ-6 ಮತ್ತು 7 ರವರೊಂದಿಗೆ ಬಸವಸಪುರಗೇಟ್ ಬಳಿ ಬಂದು ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ಮಾಹಿತಿ ತಿಳಿಸಿ ಎಲ್ಲರೂ ಅಲ್ಲೇ ಸ್ಥಳದಲ್ಲಿ ಕಾಯುತ್ತಿದ್ದಾಗ ನಂಜನಗೂಡು ಪಟ್ಟಣ ಕಡೆಯಿಂದ ಒಬ್ಬ ಆಸಾಮಿಯೂ ತನ್ನ ಬಾಬ್ತು ಟಿ.ವಿ.ಎಲ್ ಸುಜುಕಿ ಮೋಟಾರ್ ಬೈಕ್ ನಂ.ಕೆಎ-09-ಇ-9499 ಮೋಟಾರ್ ಬೈಕಿನ ಮುಂಭಾಗದಲ್ಲಿ ಒಂದು ಪಾಲಿಥೀನ್ ಚೀಲದಲ್ಲಿ ಏನನ್ನೋ ಇಟ್ಟುಕೊಂಡು ಬರುತ್ತಿದ್ದು ಅನುಮಾನ ಬಂದು ಆತನನ್ನು ತಡೆದು ನಿಲ್ಲಿಸಿ ನೋಡಲಾಗಿ ಅದರಲ್ಲಿ 2 ರಟ್ಟಿನ ಬಾಕ್ಸ್ ಗಳನ್ನು ಇದ್ದು ಅವುಗಳನ್ನು ಪರಿಶೀಲಿಸಲಾಗಿ ಮೊದಲನೆ ರಟ್ಟಿನ ಬಾಕ್ಸ್ ನಲ್ಲಿ 180 ಎಂ.ಎಲ್. ನ 44 ವಿಸ್ಡರ್ ಡೀಲಕ್ಸ್ ಮದ್ಯದ ಬಾಟಲಿಗಳು ಮತ್ತು ಮತ್ತೊಂದು ರಟ್ಟಿನ ಬಾಕ್ಸ್ ನಲ್ಲಿ 180 ಎಂ.ಎಲ್. ನ 44 ಓರಿಜಿನಲ್ ಚಾಯ್ಸ್ ಡೀಲಕ್ಸ್

ವಿಸ್ಕಿಯ ಮದ್ಯದ ಬಾಟಲಿಗಳು ಇರುವುದು ಕಂಡುಬಂದಿರುತ್ತದೆ. ನಂತರ ಆತನ ಹೆಸರು ಕೇಳಲಾಗಿ ಕೃಷ್ಣ ಬಿನ್ ಲೇಟ್ ವೆಂಕಟೇಗೌಡ ಚಾಮಲಾಪುರ, ನಂಜನಗೂಡು ಎಂದು ತಿಳಿಸಿದ್ದು ಸದರಿ ಮದ್ಯವನ್ನು ಹೊಂದಲು ಪರವಾನಗಿ ಇದೆಯೇ ಕೇಳಲಾಗಿ ಇಲ್ಲ ಎಂದು ತಿಳಿಸಿದನು. ನಂತರ ಪಂಚರ ಸಮಕ್ಷಮ ಆರೋಪಿಯಿಂದ ವಶಕ್ಕೆ ಪಡೆಯಲಾದ 2 ರಟ್ಟಿನ ಬಾಕ್ಸ್ ನಲ್ಲಿ ಇದ್ದ ಮದ್ಯದ ಬಾಟಲಿಗಳು ಪೈಕಿ ಒಂದೂಂದು ರಟ್ಟಿನ ಬಾಕ್ಸ್ ನಿಂದ ತಲಾ ಒಂದು ಬಾಟಲಿಗಳನ್ನು ಸಾಂಪಲ್ ಗಾಗಿ ಮಾದರಿ ತೆಗೆದು  ಸೀಲು ಮಾಡಿ ನನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಗಳನ್ನು ಅಂಟಿಸಲಾಯಿತು. ಕೃತ್ಯಕ್ಕೆ ಬಳಸಲಾದ ಮೋಟಾರ್ ಬೈಕ್ ನಂ.ಕೆಎ–09–ಇ–9499 ಟಿ.ವಿ.ಎಸ್ ಸುಜುಕಿ ಮೋಟಾರ್ ಬೈಕ್ ಮತ್ತು ಪಾಲಿಥೀನ್ ಚೀಲವನ್ನು ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಳ್ಳಲಾಯಿತು ನಂತರ ಮಹಜರ್ ಅನ್ನು ಸ್ಥಳದಲ್ಲಿ ಸಂಜೆ 5.00 ರಿಂದ 6.00 ಗಂಟೆ ವರೆಗೆ ಜರುಗಿಸಲಾಯಿತು. ಸಾಕ್ಷಿಗೆ ಈಗ ಒಂದುದಾಖಲೆ ತೋರಿಸಿದ್ದು ಅದನ್ನು ಸ್ಥಳ ಮಹಜರ್ ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರತಿಸಿದ್ದು ಅದನ್ನು ನಿಪಿ–9 ಎಂದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿದ್ದು ಅದನ್ನು ನಿಪಿ–9(ಎ) ಎಂದು ಗುರುತಿಸಲಾಯಿತು. ನಿಪಿ–1 ನ್ನು ನನ್ನ ಉಕ್ತಲೇಖನದಂತೆ ಚಾಸಾ–7 ರವರು ಬರೆದಿರುತ್ತಾರೆ. ನಂತರ ಆರೋಪಿ ಮತ್ತು ಮಾಲೀನ ಸಮೇತ ಠಾಣೆಗೆ ಹಾಜರಾಗಿ ಸ್ವ–ವರದಿಯನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಚಾಸಾ–8 ರವರಿಗೆ ಆರೋಪಿ, ಮಹಜರ್ ಮತ್ತು ಮಾಲುಗಳನ್ನು ನೀಡಿರುತ್ತೇನೆ.  ಸಾಕ್ಷಿಯು ಸ್ವ–ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ–4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತು ಪಡಿಸಿಕೊಂಡ ಮದ್ಯದ ಬಾಟಲಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ–1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ಆರೋಪಿಯನ್ನು ನೋಡಿದರಗೆ ಗುರುತಿಸಬಲ್ಲೇ, ಆದರೆ ಆರೋಪಿಯು ತಲೆಮರೆಸಿಕೊಂಡಿರುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**